22 ಪ್ರಾಜೆಕ್ಟುಗಳ ಮೂಲಕ ವಿಜ್ಞಾನದ ಬೋಧನೆ

ಪ್ರಿಯಾಂಕ

ಆಟದ ಸಮಯದ ನಂತರ ವಿದ್ಯಾರ್ಥಿಗಳು ಬಲು ಹುರುಪು ಉತ್ಸಾಹದಿಂದ ತಮ್ಮ ತರಗತಿಗೆ ಮರಳಿದ್ದರು. ಅವರಲ್ಲಿ ಕೆಲವರು ಇನ್ನೂ ಮೋಜಿನ ಮನಸ್ಥಿತಿಯಲ್ಲಿದ್ದರೆ, ಇನ್ನು ಕೆಲವರು ವಿಶ್ರಮಿಸಲು ಪ್ರಯತ್ನಿಸುತ್ತಿದ್ದರು. ಆದರೆ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಶಿಕ್ಷಕರ ಬರುವಿಕೆಯನ್ನು ಕಾತರದಿಂದ ಕಾಯುತ್ತಿದ್ದರು. ಅವರಲ್ಲಿ ಒಬ್ಬ ವಿದ್ಯಾರ್ಥಿ ಪದೇ ಪದೇ ಹೊರಗೆ ಇಣುಕಿ ನೋಡುತಿದ್ದು ಶಿಕ್ಷಕರು ತರಗತಿಯ ಕಡೆಗೆ ಬರುತ್ತಿರುವುದನ್ನು ತಿಳಿಸಿದನು. ಶಿಕ್ಷಕರು ತರಗತಿಯನ್ನು ಪ್ರವೇಶಿಸಿದ ಕೂಡಲೇ ಪ್ರತಿ ವಿದ್ಯಾರ್ಥಿಯೂ ಏನನ್ನೋ ಹೇಳಲು ಪ್ರಯತ್ನಿಸುತ್ತಿದ್ದರು. ಅವರು ಅನೇಕ ಸಣ್ಣ ಗುಂಪುಗಳಾಗಿ ವೃತ್ತಾಕಾರವಾಗಿ ಒಂದೆಡೆ ಗುಂಪುಕೂಡಿದ ಅನಂತರ ಮಾತು, ವಾದ, ವಿವಾದಗಳಲ್ಲಿ ತೊಡಗಿಕೊಂಡರು. ಶಿಕ್ಷಕರೂ ಇವರಲ್ಲಿ ಒಂದು ಗುಂಪಿಗೆ ಸೇರಿದರು ಮತ್ತು ಇತರ ಗುಂಪಿನವರಿಗೆ ತಾವು ಅವರ ಗುಂಪಿಗೂ ಬಂದು ಸೇರುವುದಾಗಿ ಆಶ್ವಾಸನೆ ನೀಡಿದರು. ಇದೇನಿದು ಇದು ಎಲ್ಲಾ ಶಾಲೆಗಳಲ್ಲಿನ ತರಗತಿಗಳಲ್ಲಿ ಸರ್ವೇ ಸಾಮಾನ್ಯವಾದದ್ದೇ ಅಥವಾ ಇಲ್ಲಿ ಏನಾದರೂ ಭಿನ್ನವಾಗಿ ನಡೆಯುತ್ತಿದೆಯೇ?

ಸ್ವಲ್ಪ ಹೊತ್ತಿಗೆ ಗೊತ್ತಾಯಿತು ಈ ವಿದ್ಯಾರ್ಥಿಗಳು "ವಿದ್ಯುತ್ ಉಳಿಸಿ" ಎಂಬ ವಿಷಯಕ್ಕೆ ಸಂಬಂಧಿಸಿದ ಕಲಿಕಾ ಕಾರ್ಯದಲ್ಲಿ ತೊಡಗಿದ್ದರು. ಅವರು ಶಿಕ್ಷಕರೊಂದಿಗೆ ಈ ಕಾರ್ಯದ ಯೋಜನೆಯನ್ನು ತಯಾರುಮಾಡಿದ್ದರು ಹಾಗೂ ಕಳೆದ ಒಂದು ತಿಂಗಳಿನಿಂದಲೂ ಈ ಯೋಜನಾ ಕಾರ್ಯದಲ್ಲಿ ತೊಡಗಿದ್ದರು. ವಾರದಲ್ಲಿ ಒಂದು ದಿನ ಅವರು ತರಗತಿಯಲ್ಲಿ ತಮ್ಮ ಯೋಜನೆಯನ್ನು ಕುರಿತು ಚರ್ಚಿಸುತ್ತಿದ್ದರು. ಅದರಲ್ಲಿ ಅನೇಕ ಸ್ವಾರಸ್ಯಕರವಾದ ಕಲಿಕಾ ಚಟುವಟಿಕೆಗಳಿದ್ದವು. ಅವುಗಳೆಂದರೆ –

- ತಮ್ಮ ಮನೆಯ ಆ ತಿಂಗಳಿನ ವಿದ್ಯುತ್ ಬಿಲ್ಲನ್ನು (ವಿದ್ಯುತ್ ಬಳಕೆ ಮತ್ತು ಅದಕ್ಕೆ ಪಾವತಿಸಬೇಕಾದ ಹಣ) ತಮ್ಮ ಶಿಕ್ಷಕರ ಸಹಾಯದಿಂದ ವಿಶ್ಲೇಷಿಸಿ ನೋಡುವುದು
- ತಂದೆತಾಯಿ/ಕುಟುಂಬದವರ ಸಹಾಯದಿಂದ ನಿರ್ದಿಷ್ಟ ಅಂತರದಲ್ಲಿ ವಿದ್ಯುತ್ ಮಾಪಕ ಸೂಚಿಸುವ ಬಳಕೆಯನ್ನು ದಾಖಲಿಸುವುದು
- ತಮ್ಮ ಮನೆಯಲ್ಲಿರುವ ವಿದ್ಯುತ್ ಉಪಕರಣಗಳಾದ ದೀಪಗಳು, ವಿದ್ಯುತ್ ಪಂಕಗಳು, ಮಿಕ್ಸರ್, ಇಸ್ತ್ರಿಪೆಟ್ಟಿಗೆ, ತಂಪು ಪೆಟ್ಟಿಗೆಗಳು ಮುಂತಾದುವುಗಳ ಪಟ್ಟಿಯನ್ನು ಅವುಗಳ ವೋಲ್ಟೇಜು ಹಾಗು ವ್ಯಾಟು ಸಾಮರ್ಥ್ಯವಿವರದೊಂದಿಗೆ ತಂದೆತಾಯಿ/ಕುಟುಂಬದವರ ಸಹಾಯದಿಂದ ತಯಾರಿಸುವುದು
- ಮನೆಯಲ್ಲಿನ ಸಾಧಾರಣ ವಿದ್ಯುತ್ ಬಲ್ಬುಗಳನ್ನು, ಟ್ಯೂಬ್ ಲೈಟುಗಳನ್ನು ತೆಗೆದು ಬದಲಾಗಿ ಸಿಎಫ್‌ಎಲ್ ಬಲ್ಬುಗಳನ್ನು ಹಾಕುವುದು
- ಬಳಕೆ ಮಾಡದೇ ಇರುವಾಗ ದೀಪಗಳನ್ನು, ಪಂಕಗಳನ್ನು ಮರೆಯದೇ ಆರಿಸುವುದು, ಟಿ. ವಿ, ಗಣಕಯಂತ್ರ, ಚರದೂರವಾಣಿ ಚಾರ್ಜರ್‌ಗಳ ಪ್ಲಗ್ಗುಗಳನ್ನು ಆರಿಸಿದ ಅನಂತರ ವಿದ್ಯುತ್ ಸಾಕೆಟ್‌ನಿಂದ ತೆಗೆದಿಡುವುದು ಮುಂತಾದ ವಿದ್ಯುತ್ ಉಳಿತಾಯ ವಿಧಾನಗಳನ್ನುಅನುಸರಿಸುವುದು.
- ಒಂದು ತಿಂಗಳವರೆಗೂ ವಿವಿಧ ಉಪಕರಣಗಳ ಪ್ರತಿನಿತ್ಯದ (ಅಂದಾಜು) ವಿದ್ಯುತ್ ಬಳಕೆ ಸಮಯವನ್ನು ದಾಖಲಿಸಿಕೊಳ್ಳುವುದು. ಉದಾಹರಣೆಗೆ 'ಎಕ್ಸ್' ವ್ಯಾಟ್‌ನ ಮೂರು ವಿದ್ಯುತ್ ದೀಪಗಳನ್ನು 'ವೈ' ಗಂಟೆಗಳವರೆಗೆ; 'ಎಂ' ವ್ಯಾಟ್‌ನ ಎರಡು ವಿದ್ಯುತ್ ಪಂಕಗಳನ್ನು 'ಎನ್' ಗಂಟೆಗಳವರೆಗೆ, 'ಎ' ವ್ಯಾಟ್‌ನ ಇಸ್ತ್ರೀ ಪೆಟ್ಟಿಗೆಯನ್ನು 'ಬಿ' ಅವಧಿಯವರೆಗೆ ಹೀಗೆ ದಾಖಲಿಸುತ್ತಾ ಹೋಗುವುದು. (ತಾವು ಮನೆಯಲ್ಲಿ ಇಲ್ಲದಿರುವಾಗ ತಮಗೆ ಇದರ ದಾಖಲೆಗಳನ್ನು ತಿಳಿಸುವಂತೆ ಮನೆಯಲ್ಲಿರುವವರನ್ನು ಕೇಳಿ ಪಡೆದುಕೊಳ್ಳುವುದು)
- ಸಮಯದ ನಿಯತ ಅಂತರದಲ್ಲಿ ತಮ್ಮ ದಾಖಲೆಗಳನ್ನು



BANGALORE ELECTRICITY SUPPLY COMPANY LTD.

1520392: BPT SUB DIVISION

Assistant Executive Engineer (Ele.) . (Commercial . Operation &

Name & Address :		Rdg Date	: 01/05/2009
MANAGING PARTNER		RR No	: BP753
11,KIADB		Tariff	: LT5(C)II
11,KIADB		Billing Month	: May-2009
IVRS ID : 1520302032625		Bill Due Dt	: 16-05-2009
Sub Division : BPT SUB DIVISION		Bill No	: 3231

Description

MR Code	AE2	Sanct. Ld HP + KW	64.00HP + 0.00 KW
Present Reading	8839.1	Total Load	0.00
Previous Reading	8707.1	MD Recorded	0.38
BKWH	132.00	MD Load	0.00
Constant	10.00	Recorded PF	1.00
Consumption	1320.00	Instl Status	1

BILL DETAILS

Fixed Charges 1st	Units	Rate(Rs)	Amount(Rs)
1st Slab	64.00	35.00	2240.00
2nd Slab	0.00	0.00	0.00
3rd Slab	0.00	0.00	0.00
Energy Charges			
1st Slab	500	3.30	1650.00
2nd Slab	500	3.80	1900.00
3rd Slab	320	4.05	1296.00
4th Slab	0.00	0.00	0.00
5th Slab	0.00	0.00	0.00
6th Slab	0.00	0.00	0.00
PF Penalty			0.00
EMD Penalty			0.00
Other Penalty			0.00
Debit			0.00
Tax			355.02
Arrears			0.00
Interest			14.38
Arrears + Interest			14.20
Bill Amount			7455.00
Rebate			0.00
Credit			0.00
Total Amt Payable			7455

For Assistant Executive Engineer (Ele.) (BPT SUB DIVISION)

ಹಾಗು ಗಮನಿಸಿದ ಅಂಶಗಳನ್ನು ಜೊತೆಗಾರರೊಂದಿಗೆ ಮತ್ತು ಶಿಕ್ಷಕರೊಂದಿಗೆ ಹಂಚಿಕೊಳ್ಳುವುದು.

- ತಿಂಗಳ ಬಳಕೆಯನ್ನು ಲೆಕ್ಕಹಾಕಿ ವಿದ್ಯುತ್ ಶುಲ್ಕವನ್ನು ತಮ್ಮ ದಾಖಲೆಯ ಆಧಾರದ ಮೇಲೆ ಅಂದಾಜು ಮಾಡುವುದು.
- ಹಿಂದಿನ ತಿಂಗಳ ವಿದ್ಯುತ್ ಬಿಲ್ಲನ್ನು ಈ ತಿಂಗಳ ವಿದ್ಯುತ್ ಬಿಲ್ಲಿನೊಂದಿಗೆ ಹೋಲಿಸುವುದು ಮತ್ತು ಸಾಮ್ಯತೆ ಮತ್ತು ಭಿನ್ನತೆಗಳ ಬಗ್ಗೆ ಹಾಗೂ ಈ ಕೆಳಗಿನ ವಿಷಯಗಳ ಬಗ್ಗೆ ವಿಶ್ಲೇಷಣೆ ಹಾಗೂ ಪರ್ಯಾಲೋಚನೆಗಳನ್ನು ನಡೆಸುವುದು –
  - ಲೆಕ್ಕಾಚಾರ ಮಾಡಿದ ಬಳಕೆ ಮತ್ತು ಬಿಲ್ಲಿನಲ್ಲಿ ತೋರಿಸಿದ ಬಳಕೆಯಲ್ಲಿ ಏನಾದರೂ ಸಾಮ್ಯತೆಗಳು ಅಥವಾ ವ್ಯತ್ಯಾಸಗಳಿವೆಯೇ?
  - ಇದ್ದಲ್ಲಿ, ಇದಕ್ಕೆ ಕಾರಣಗಳೇನು?
  - ಕಳೆದ ಬಿಲ್ಲಿನ ಹಣಕ್ಕಿಂತ ಈಗ ಬಿಲ್ಲಿನ ಹಣ ಹೆಚ್ಚಾಗಿದೆಯೋ ಅಥವಾ ಕಡಿಮೆ ಇದೆಯೋ?
  - ಉಳಿತಾಯ ಆಚರಣೆಯಲ್ಲಿ ಏನಾದರೂ ತೊಂದರೆಗಳನ್ನು ಎದುರಿಸಿದರೆ?
  - ಆ ತೊಂದರೆಗಳು ಯಾವುವು?
  - ಇವೇ ಅಭ್ಯಾಸಗಳನ್ನು ಮುಂದುವರೆಸುವರೇ? ಹಾಗಿದ್ದರೆ ಯಾಕೆ ಮತ್ತು ಯಾಕಿಲ್ಲ?
- ಪ್ರತಿ ಮನೆಯ ಪ್ರತಿ ನಿತ್ಯದ ಸರಾಸರಿ ವಿದ್ಯುತ್ ಬಳಕೆಯ ಅಂದಾಜಿನ ಲೆಕ್ಕಾಚಾರ
- ದಾಖಲೆಗಳನ್ನು ಸಂಗ್ರಹಿಸುವುದು ಮತ್ತು ಅದನ್ನು ನಿರೂಪಿಸುವುದು (ಆಯಾ ಗುಂಪಿನಲ್ಲಿ ಮತ್ತು ಇಡಿ ತರಗತಿಯಲ್ಲಿ)
- ತಾವು ಕಂಡುಕೊಂಡದ್ದನ್ನು ವಿನಿಮಯಿಸಿಕೊಳ್ಳುವುದು ಅಂದರೆ ಇದೇ ರೀತಿಯ ಯೋಜನೆಯನ್ನು ಮಾಡುತ್ತಿರುವ ಇತರ ಶಾಲೆಗಳ(ಇತರ ದೇಶದ) ವಿದ್ಯಾರ್ಥಿಗಳ ಜೊತೆ ತಲಾವಾರು ಬಳಕೆ ಹಾಗೂ ಮಿತವ್ಯಯಾಚರಣೆಗಳನ್ನು ಕುರಿತ ತಮ್ಮ ನಿರ್ಧಾರಗಳನ್ನು ಹಂಚಿಕೊಳ್ಳುವುದು ಮತ್ತು ಹೋಲಿಸಿನೋಡುವುದು.
- ಇದನ್ನೆಲ್ಲಾ ಮಾಡುವ ಅವಶ್ಯಕತೆ ಇದೆಯೇ, ಹಾಗಿದ್ದರೆ ಯಾಕೆ? ಎರಡು ಬಿಲ್ಲುಗಳನ್ನು ಹೋಲಿಸಿ ನೋಡಿ ಇದೇ ವಿಷಯವನ್ನು ತಿಳಿಸಬಹುದಾಗಿತ್ತಲ್ಲ. ವಿದ್ಯಾರ್ಥಿಗಳು (12ರಿಂದ 14 ವಯಸ್ಸಿನವರು) ಈ ಚಟುವಟಿಕೆಯ ಮೂಲಕ ವಿದ್ಯುತ್ ಇಲಾಖೆಯ ತಾಂತ್ರಿಕ ಶಬ್ದಗಳು, ಕಾನೂನು ಮತ್ತು ತತ್ವ ಹಾಗು ಪರಿಕಲ್ಪನೆಗಳ ಜ್ಞಾನವನ್ನು ಹೇಗೆ ಗಳಿಸಿಕೊಂಡರು? ಎಂದು ಯಾರಾದರೂ ಕೇಳಬಹುದು ಅಥವಾ ವಾದಿಸಬಹುದು. ನಾವು ಇದಕ್ಕೆ ಬೇರೆ ರೀತಿಯಲ್ಲೇ ಕೆಲವು ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳೋಣ - ಈ ಕಾರ್ಯದ ಹಿಂದಿರುವ ಕಲಿಕಾ ಉದ್ದೇಶವೇನು ಹಾಗೂ ಈ ಚಟುವಟಿಕೆಯಿಂದ ನಿರೀಕ್ಷಿಸಬಹುದಾದ ಕಲಿಕಾ ಫಲಗಳೇನು? ಕಲಿಕಾ ಪ್ರಕ್ರಿಯೆಯು ವಿಜ್ಞಾನದ ಸ್ವರೂಪದೊಂದಿಗೆ, ವಿಜ್ಞಾನ ಶಿಕ್ಷಣದ ಉದ್ದೇಶದೊಂದಿಗೆ ಮತ್ತು ಶಿಕ್ಷಣದ ಗುರಿಗಳಿಗೆ ಅನುಗುಣವಾಗಿದೆಯೇ?

ಈ ವಿಷಯಕ್ಕೆ ಸಂಬಂಧಿಸಿದಂತೆ ತರಗತಿಯಲ್ಲಿ ಉಪಯೋಗಿಸುತ್ತಿರುವ/ಉಪಯೋಗಿಸಬಹುದಾದ ಕೆಲವೊಂದು ಕಾರ್ಯಗಳನ್ನು ಪರಿಗಣಿಸಿರಿ:–

ಒಂದು. ಪಠ್ಯಪುಸ್ತಕವನ್ನು ಓದಿ ಪಾಠದ ಅಧ್ಯಾಯದ ಕೊನೆಯಲ್ಲಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸುವುದು.

ಎರಡು. ಇನ್ನಿತರ ಕೆಲವು ಪ್ರಶ್ನೆಗಳಿಗೆ ಉತ್ತರಿಸುವುದು - ವಿದ್ಯುತ್ ಉಳಿಸಲು ನೀವು ಅನುಸರಿಸಬಹುದಾದ ಐದು ಅಭ್ಯಾಸಗಳನ್ನು ಪಟ್ಟಿಮಾಡಿ.

ಮೂರು. "ವಿದ್ಯುತ್ ಉಳಿತಾಯ"ದ ಬಗ್ಗೆ ಚಾರ್ಟ್/ಭಿತ್ತಿಪತ್ರ/ಪವರ್–ಪಾಯಿಂಟ್ ನಿರೂಪಣೆಗಳನ್ನು ವಿದ್ಯಾರ್ಥಿಗಳಿಂದ ಮಾಡಿಸುವುದು ಮತ್ತು ತರಗತಿಯಲ್ಲಿ ಚರ್ಚೆಗಳನ್ನು ನಡೆಸುವುದು.

ನಾಲ್ಕು. ವಿದ್ಯುತ್ ಬಿಕ್ಕಟ್ಟುಗಳು ಅಥವಾ ವಿದ್ಯುತ್ ತಯಾರಿಕೆ ಮತ್ತು ಅದರ ಉಳಿತಾಯದ ಬಗ್ಗೆ ಚಲನಚಿತ್ರ ಅಥವಾ ಕಿರುಚಿತ್ರವನ್ನು ತೋರಿಸುವುದು.

ಐದು. ಒಂದು ಜಲವಿದ್ಯುತ್/ಶಾಖೋತ್ಪನ್ನ ವಿದ್ಯುತ್ ಸ್ಥಾವರಕ್ಕೆ ಭೇಟಿ ನೀಡುವುದು. ತದನಂತರ ಶಿಕ್ಷಕರು/ತಜ್ಞರಿಂದ ಉಪನ್ಯಾಸವನ್ನು ಏರ್ಪಡಿಸುವುದು.

ಆರು. ಚರ್ಚೆ ಪ್ರಚೋದಿಸುವಂತೆ ಹಾಗೂ ಎಲ್ಲಾ ವಿದ್ಯಾರ್ಥಿಗಳು ಮನವಿಟ್ಟು ಭಾಗವಹಿಸುವಂತೆ ನೋಡಿಕೊಳ್ಳಲು ಚರ್ಚೆಯ ಅಂಶಗಳನ್ನು ಕಥೆಯ ರೂಪದಲ್ಲಿ ಅಥವಾ ನೈಜ ದೃಷ್ಟಾಂತ ಬಳಸಿ ಹೆಣೆಯುವುದು.

ಏಳು. ಅತಿ ಹೆಚ್ಚು ವಿದ್ಯುತ್ ತೆಗೆದುಕೊಳ್ಳುವ ಕೆಲವು ಉಪಕರಣಗಳ ಬಳಕೆಯನ್ನು ಕಡಿಮೆ ವಿದ್ಯುತ್ ಉಳಿಸುವ ಉಪಕರಣಗಳಿಗೆ ಬದಲಾಯಿಸುವುದು ಹಾಗೂ ಹಿಂದಿನ ವಿದ್ಯುತ್ ಬಿಲ್ಲನ್ನು ನಂತರದ ಬಿಲ್ಲಿನೊಂದಿಗೆ ಹೋಲಿಸಿ ಚರ್ಚೆಯನ್ನು ನಡೆಸುವುದು.

ಎಂಟು. ಒಂದು ತಿಂಗಳವರೆಗೂ ವಿದ್ಯುತ್ ಉಳಿತಾಯದ ಆಚರಣೆ, ಗುಂಪುಗಳಲ್ಲಿ ಆಗಾಗ್ಗೆ ಚರ್ಚೆ ಮತ್ತು ವಿಷಯಗಳ ವಿನಿಮಯವನ್ನು ಮಾಡುತ್ತಾ ವಿಶ್ಲೇಷಣೆ ಮಾಡಿ ವರದಿ ಮಾಡುವುದು.

ಈ ಚಟುವಟಿಕೆಗಳ ಪಟ್ಟಿ ಸಮಗ್ರವಲ್ಲವಾದ ಕಾರಣ ಸಂಪನ್ಮೂಲಗಳು, ಸನ್ನಿವೇಶ, ಶಿಕ್ಷಕರ ಗುಣಗಳು ಮತ್ತು ಇನ್ನಿತರ ವಿಷಯಗಳನ್ನು ಅವಲಂಬಿಸಿ ಬೋಧನೆ ಮತ್ತು ಕಲಿಕೆಗೆ ಇನ್ನೂ ಅನೇಕ ವಿಧಾನ ಬಳಸಬಹುದು, ಅವುಗಳು:

- ನಿಜ ಜೀವನದ ಸನ್ನಿವೇಶಗಳಲ್ಲಿ ಸಂತಸದಾಯಕ ಕಲಿಕೆಯನ್ನು ನೀಡುವಂತಿರಬೇಕು.

- ಜ್ಞಾನವನ್ನು ಅರ್ಥಪೂರ್ಣವಾಗಿ ಸಂರಚಿಸಿಕೊಳ್ಳುವಂತೆ ಉತ್ತೇಜಿಸಬೇಕು.
- ವಿದ್ಯಾರ್ಥಿಗಳಿಗೆ ನಾವೇ ಖುದ್ದಾಗಿ ಮಾಡಿದ್ದು ಎಂಬ ಹೆಮ್ಮೆ ಹಾಗು ಜವಾಬ್ದಾರಿಯ ಅನುಭವವನ್ನು ಒದಗಿಸಬೇಕು.
- ಅಂದಾಜು ಮಾಡುವುದು, ಮಾಪನ, ದತ್ತಾಂಶಗಳ ದಾಖಲೆ, ವಿಶ್ಲೇಷಣೆ, ವ್ಯಾಖ್ಯಾನಿಸುವುದು, ವಿನ್ಯಾಸಗೊಳಿಸುವುದು ಮುಂತಾದ ವೈಜ್ಞಾನಿಕ ಕೌಶಲಗಳನ್ನು ಇನ್ನಷ್ಟು ನಿಶಿತಗೊಳಿಸಬೇಕು ಮತ್ತು ಅವುಗಳಲ್ಲಿ ಪ್ರಭುತ್ವವನ್ನು ಸಾಧಿಸುವಂತೆ ಮಾಡಬೇಕು.
- ಎಳೆಯ ವಿದ್ಯಾರ್ಥಿಗಳಲ್ಲಿ ಗಮನಿಸಿ ನೋಡುವ. ವಿಚಾರಣೆ ಮಾಡುವ ಮತ್ತು ಆಲೋಚಿಸುವ ಸಾಮರ್ಥ್ಯಗಳನ್ನು ಪೋಷಿಸಬೇಕು.
- ನಮ್ಮ ದೈನಂದಿನ ಜೀವನದಲ್ಲಿನ ಪ್ರಮುಖ ಸಮಸ್ಯೆಗಳ ಬಗ್ಗೆ ಅವರ ಧೋರಣೆ, ಅಭ್ಯಾಸಗಳು ಮತ್ತು ಸಂವೇದನೆಯನ್ನು ಬದಲಿಸಿಕೊಳ್ಳಲು ಸಾಧ್ಯವಾಗುವಂತೆ ಮಾಡಬೇಕು.
- ಅವರಿಗೆ ಗುಂಪು ಕಲಿಕೆಯನ್ನು ಅನುಭವಿಸುವಂತೆ ಮತ್ತು ಅವರ ಗುಂಪು ವರ್ತನೆಯನ್ನು ರೂಪಿಸಿಕೊಳ್ಳುವಂತೆ ಮಾಡಬೇಕು.

ಹಿರಿಯ ಪ್ರಾಥಮಿಕ ಶಾಲೆ ಅಥವಾ ಅದಕ್ಕೂ ಮೇಲಿನ ತರಗತಿಗಳಲ್ಲಿನ ವಿದ್ಯಾರ್ಥಿಗಳಿಗೆ ಬೆಳೆ ಉತ್ಪಾದನೆಯ ಬಗ್ಗೆ ಕಲಿಯಲು ಸಾಧ್ಯವಾಗುವಂತಹ ಕೆಲವು ಕಲಿಕಾ ತಂತ್ರಗಳನ್ನು ನೋಡೋಣ.

1. ಸಮೀಪವಿರುವ ಹೊಲ-ಗದ್ದೆಗಳಿಗೆ ಭೇಟಿ ಮತ್ತು ರೈತರೊಂದಿಗೆ ಸಂವಾದ; ಬೆಳೆ ಸಾಗುವಳಿಯ ಇಡೀ ಅವಧಿಯಲ್ಲಿನ ವಿವಿಧ ಬೇಸಾಯ ಕಾರ್ಯಾಚರಣೆಗಳನ್ನು ಅವಲೋಕಿಸುವುದು (ವಿದ್ಯಾರ್ಥಿಗಳ ವಿವಿಧ ಗುಂಪುಗಳು ವಿವಿಧ ಬೆಳೆಗಳ ಬಗ್ಗೆ ಗಮನ ನೀಡಬೇಕು); ವಿವಿಧ ಹಂತಗಳಲ್ಲಿನ ವಿಭಿನ್ನ ಕಾರ್ಯಾಚರಣೆಗಳನ್ನು ಹೋಲಿಸುವುದು, ವಿವಿಧ ಹಂತಗಳಲ್ಲಿ ತಾವು ಅವಲೋಕಿಸಿರುವುದನ್ನು ದಾಖಲಿಸುವುದು; ತಮ್ಮ ಜೊತೆಗಾರರಿಗೆ ವರದಿ ನೀಡುವುದು ಮತ್ತು ಅವರೊಡನೆ ತಮ್ಮ ಅನುಭವವನ್ನು ಹಂಚಿಕೊಳ್ಳುವುದು.

2. ವಿವಿಧ ಭೌಗೋಳಿಕ ಪರಿಸರದಲ್ಲಿರುವ ವಿದ್ಯಾರ್ಥಿಗಳೊಂದಿಗೆ ತಮ್ಮಲ್ಲಿನ ಕೃಷಿ ಪದ್ಧತಿ ಮತ್ತು ಬೆಳೆ ವಿನ್ಯಾಸಗಳನ್ನು ಕುರಿತ ಮಾಹಿತಿಯನ್ನು ವಿನಿಮಯಮಾಡಿಕೊಳ್ಳುವುದು.

3. 4 ಮೀ x 4ಮೀ ನಷ್ಟು ಸಣ್ಣ ಜಾಗದಲ್ಲಿ 4-5 ವಿದ್ಯಾರ್ಥಿಗಳಿರುವ

ಸಣ್ಣ ಗುಂಪುಗಳು ವಿವಿಧ ಬೆಳೆಗಳಾದ ಬೇಳೆ-ಕಾಳುಗಳು, ಧಾನ್ಯಗಳು, ತರಕಾರಿ ಅಥವಾ ಹೂಗಳನ್ನು ಒಂದೊಂದು ಗುಂಪಿನವರು ಒಂದೊಂದರಂತೆ ಬೆಳೆಯುವುದು (ಅಥವಾ ಒಂದೇ ಬೆಳೆಯನ್ನು

ಒತ್ತಡರಹಿತ ಪರಿಸರ ವಿದ್ಯಾರ್ಥಿಗಳು ಮನವಿಟ್ಟು ಕಲಿಯುವಂತೆ ನೋಡಿಕೊಳ್ಳುತ್ತದೆ..

ವಿಭಿನ್ನ ಜೈವಿಕ ರಸಗೊಬ್ಬರ ಅಥವಾ ಜೈವಿಕ ಕೀಟನಾಶಕಗಳನ್ನು ಬಳಸಿ ಬೆಳೆಯುವುದು) ಇದಕ್ಕೆ ಸ್ಥಳೀಯ ಜ್ಞಾನ ಮತ್ತು ಸಂಪನ್ಮೂಲಗಳ ಬಗ್ಗೆ ಶಿಕ್ಷಕರ. ಶಾಲೆಯ ಮತ್ತು ಸಮುದಾಯದ ಸಹಾಯವನ್ನುಪಡೆದುಕೊಳ್ಳುವುದು, ವಿವಿಧ ಕಾರ್ಯಾಚರಣೆಗಳ ಬಗ್ಗೆ ತಿಳಿದುಕೊಳ್ಳುವುದು ಹಾಗೂ ದಾಖಲೆಗಳನ್ನು ನಿರ್ವಹಿಸುವುದು ಮತ್ತು ಋತುಮಾನದ ಕೊನೆಯಲ್ಲಿ

ವಿಜ್ಞಾನ ಕಲಿಕೆಯಲ್ಲಿ ಆನಂದ

ವರದಿಯನ್ನು ನೀಡುವುದು.

ಪ್ರಾಜೆಕ್ಟು ಮೂಲಕ ಬೋಧಿಸುವ ವಿಧಾನಗಳು ಹೊಸತೇನಲ್ಲ ಮತ್ತು ಪ್ರಾಜೆಕ್ಟು ಆಧಾರಿತ ಕಲಿಕೆ ನಡೆದು ಬಂದ ದಾರಿಯನ್ನು ಡ್ಯೂಯಿಯವರ (1933) ಕಾಲದಿಂದಲೂ ಕಾಣಬಹುದು. ಪ್ರಾಜೆಕ್ಟುಗಳು ಸಾಮಾನ್ಯವಾಗಿ ಒಂದು ನಿರ್ದಿಷ್ಟ ಸನ್ನಿವೇಶವನ್ನು ಒಳಗೊಂಡಿರುತ್ತವೆ, ವಿದ್ಯಾರ್ಥಿಗಳ ಆಸಕ್ತಿ ಮತ್ತು ತಲ್ಲೀನತೆಯನ್ನು ನಿರೀಕ್ಷಿಸುತ್ತವೆ, ಬೋಧನೆ-ಕಲಿಕೆಯ ವಿವಿಧ ಚಟುವಟಿಕೆಗಳನ್ನು ಬಳಸಬೇಕಾಗುತ್ತದೆ; ಅನೇಕ ಸಂದರ್ಭಗಳಲ್ಲಿ ಅಂತಿಮ ಫಲವಾಗಿ ಎದ್ದು ಕಾಣುವ ಫಲಿತಾಂಶಗಳಾದ ವರದಿ, ಯೋಜನೆ, ಮಾದರಿ ಮುಂತಾದವುಗಳು ದೊರಕುತ್ತವೆ. ಜೊತೆಯಲ್ಲಿ ಇವು ಶಿಕ್ಷಕರ ನೆರವಿನೊಂದಿಗೆ ಬಹಳಷ್ಟು ಸಮಯದವರೆಗೂ ಮುಂದುವರೆಯುತ್ತಾ ಹೋಗುತ್ತವೆ.



ಪ್ರತಿ ಮಗುವನ್ನೂ ಜವಾಬ್ದಾರಿಯುತ ನಾಗರಿಕರನ್ನಾಗಿ ಬೆಳೆಸಬಹುದು

ಜೊತೆಗಾರರಿಂದ, ಜೊತೆಯವರೊಡನೆ ಕಲಿಕೆ

ಕೋಷ್ಟಕ – 1

ಪ್ರಾಜೆಕ್ಟುಗಳನ್ನು ಮಾಡಿಸಿ ಕಲಿಸುವುದರಿಂದ ದೊರೆಯುವ ಪ್ರಯೋಜನ	ಬೋಧನೆ ಮತ್ತು ಕಲಿಕಾ ಪ್ರಕ್ರಿಯೆಗೆ ಆಗುವ ಲಾಭಗಳು
ಮಕ್ಕಳ ಮನಸ್ಸನ್ನು ಅರ್ಥಪೂರ್ಣವಾಗಿ ತೊಡಗಿಸಿಕೊಳ್ಳುತ್ತದೆ.	• ಮಕ್ಕಳಲ್ಲಿರುವ ಸಹಜ ಕುತೂಹಲವನ್ನು ಪೋಷಿಸುತ್ತದೆ ಮತ್ತು ತಣಿಸುತ್ತದೆ. • ಅರ್ಥಪೂರ್ಣವಾಗಿ ಜ್ಞಾನವನ್ನು ಗ್ರಹಿಸಲು ಪ್ರೋತ್ಸಾಹಿಸುತ್ತದೆ. • ವರದಿಮಾಡುವುದು ಮತ್ತು ಚಿಂತನೆಯೂ ಸೇರಿದಂತೆ ಅನೇಕ ವೈಜ್ಞಾನಿಕ ಕೌಶಲಗಳನ್ನು ಬೆಳಸುತ್ತದೆ. • ಶಾಲೆಯಲ್ಲಿನ ಕಲಿಕೆಯನ್ನು ಮಕ್ಕಳ ನಿಜ ಜೀವನಕ್ಕೆ ಸಂಪರ್ಕಿಸುತ್ತದೆ. • ದೈನಂದಿನ ಅನುಭವಗಳನ್ನು ಪರಿಶೀಲಿಸುವಂತೆ ಮತ್ತು ವಿಶ್ಲೇಷಿಸುವಂತೆ ಪ್ರೋತ್ಸಾಹಿಸುತ್ತದೆ.
ಮಕ್ಕಳಲ್ಲಿರುವ ಪೂರ್ವಕಲ್ಪನೆಗಳಿಗೆ ಬೆಲೆ ನೀಡಿ ಅವುಗಳನ್ನು ಪರಿಹರಿಸುತ್ತದೆ.	• ವಿದ್ಯಾರ್ಥಿಗಳ (ಪ್ರಪಂಚದ ಅವಲೋಕನ ಮತ್ತು ಅದರೊಂದಿಗಿನ ತಮ್ಮ ಒಡನಾಟದಿಂದ ಪಡೆದ) ಪೂರ್ವಕಲ್ಪನೆಗಳು ಕಲಿಕೆಗೆ ಆಧಾರವಾಗಿರುತ್ತವೆ. • ಜ್ಞಾನ ಗ್ರಹಣೆಯ ಸಮಯದಲ್ಲಿನ ತಪ್ಪು/ಬದಲೀ ಕಲ್ಪನೆಗಳನ್ನು ನಿವಾರಿಸಿಕೊಳ್ಳಲು ಸಹಾಯ ಮಾಡುತ್ತದೆ.
ಮಕ್ಕಳ ಸಾಮರ್ಥ್ಯಗಳನ್ನು ಪೋಷಿಸುತ್ತದೆ ಮತ್ತು ಅವರ ಸ್ವ-ವಿಷಯ ಗ್ರಹಣೆಗೆ ಸಹಾಯಮಾಡುತ್ತದೆ.	• ಸ್ವತಂತ್ರ ಕಲಿಕೆಗೆ, ವಿಮರ್ಶಾತ್ಮಕ ಹಾಗೂ ತಾರ್ಕಿಕ ಆಲೋಚನೆಗೆ, ವಿಚಾರಣೆ ಮತ್ತು ಸಮಸ್ಯಾ ಪರಿಹಾರಕ್ಕೆ ಅನುಕೂಲವನ್ನು ಒದಗಿಸುತ್ತದೆ. • ತಾವೇ ಮಾಡಿ ಕಲಿಯುವುದರಿಂದ ತಮಗೆ ಏನು ತಿಳಿದಿದೆ ಮತ್ತು ಏನು ತಿಳಿದಿಲ್ಲ ಎನ್ನುವುದರ ಬಗ್ಗೆ ಅರಿವನ್ನು ಮೂಡಿಸುತ್ತದೆ. • ಸಂತಸದಾಯಕ ಕಲಿಕೆಯನ್ನು ಪೋಷಿಸುತ್ತದೆ ಮತ್ತು ಜೀವನಪರ್ಯಂತ ವಿದ್ಯಾಪಿಪಾಸುಗಳನ್ನಾಗಿ ಮಾಡುತ್ತದೆ.
ಕಲಿಯುವುದು ಹೇಗೆ ಎಂಬುದನ್ನು ಕಲಿಯುವುದು.	• ನಿರ್ದಿಷ್ಟ ಕಾರ್ಯವನ್ನು ಆಧರಿಸಿದ ಅನುಭವದಿಂದ ಕಲಿಕೆ. • ಕಲಿಕಾ ಗುರಿಗಳನ್ನು ಮತ್ತು ತಂತ್ರಗಳನ್ನು ನಿರ್ಧರಿಸುವುದರಿಂದ ಪ್ರಾರಂಭಿಸಿ ವಿದ್ಯಾರ್ಥಿಗಳನ್ನು ಕಾರ್ಯದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುತ್ತದೆ. • ಪ್ರಾಜೆಕ್ಟು ನಡೆಸಲು ಅನುಕೂಲಕರ ವಾತಾವರಣದ ಪೋಷಣೆಯು ಸಾಮಾಜಿಕ ಕಲಿಕಾ ಕೌಶಲಗಳು, ವಿಭಿನ್ನ ದೃಷ್ಟಿಕೋನಗಳನ್ನು ಗೌರವಿಸುವುದು, ವಸ್ತುನಿಷ್ಠ ದೃಷ್ಟಿಕೋನವು ವೈಜ್ಞಾನಿಕ ತನಿಖೆಯ ಮನೋಭಾವ ಮತ್ತು ಮಾನವೀಯತೆಗೆ ಎಡೆಮಾಡಿಕೊಡುತ್ತದೆ.
ವಿದ್ಯಾರ್ಥಿಯನ್ನು ಕಲಿಕಾ ಪ್ರಕ್ರಿಯೆಯ ಕೇಂದ್ರವನ್ನಾಗಿಸುತ್ತದೆ.	ಶಿಕ್ಷಕರು ಏನಿದ್ದರೂ ಇವುಗಳಿಗೆ ಸುಗಮಕಾರರಾಗಿ ವರ್ತಿಸುತ್ತಾರೆ. • ಕಲಿಕಾ ಸಂಪನ್ಮೂಲಗಳ ಒದಗಿಸಿಕೊಡುವುದು. • ವೈಜ್ಞಾನಿಕ ಕೌಶಲಗಳನ್ನು ಇನ್ನಷ್ಟು ನಿಶಿತಗೊಳಿಸುವುದು. • ಅನುಕೂಲಕರ ಕಲಿಯುವ ವಾತಾವರಣ ಕಲ್ಪಿಸುವುದು. • ಮಾಡಿದ ಕೆಲಸದ ಮೌಲ್ಯಮಾಪನ. • ಅಧಿಕೃತ ಪ್ರೇಕ್ಷಕರಿಗೆ ವರದಿ ಸಲ್ಲಿಸುವುದು.
ತರಗತಿಕೋಣೆಯ ವ್ಯಾಪ್ತಿ ಯನ್ನು ಸಮುದಾಯಕ್ಕೂ ವಿಸ್ತರಿಸುತ್ತದೆ.	• ಕಲಿಕೆಯು ಶಾಲೆಯ ಪರಿಧಿಯನ್ನು ಮೀರಿ ಸಮುದಾಯದವರಿಗೂ ವಿಸ್ತಾರಗೊಳ್ಳುತ್ತದೆ. • ಕಲಿಕಾ ಪ್ರಕ್ರಿಯೆ ಮತ್ತು ಫಲಗಳು ಸಮುದಾಯಕ್ಕೂ ಪ್ರಸರಿಸುತ್ತದೆ. • ತರಗತಿಯ ಆಚೆಗಿನ ಕಲಿಕೆಯು ವಿದ್ಯಾರ್ಥಿಗಳನ್ನು ಜವಾಬ್ದಾರಿಯುತ ನಾಗರಿಕರನ್ನಾಗಿಸುತ್ತದೆ.

ಪ್ರಾಜೆಕ್ಟು ಮಾಡಿಸಿ ಬೋಧಿಸಿದಾಗ ಆಗುವ ಕಲಿಕೆ ಮತ್ತು ಅಭಿವೃದ್ಧಿಯ ಮೌಲ್ಯಮಾಪನ

ಸಮಕಾಲೀನ ಶಾಲಾ ವ್ಯವಸ್ಥೆಯಲ್ಲಿ ಈಗ ಇರುವ ವರ್ಷದ ಕೊನೆಯಲ್ಲಿ ಒಟ್ಟಾರೆ ಮೌಲ್ಯಮಾಪನ ಮಾಡುವ ಪದ್ಧತಿಯನ್ನು ಬಿಟ್ಟು ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಪದ್ಧತಿಯನ್ನು ಬಳಸಲಾಗುತ್ತಿದೆ. ಈ ಕ್ರಮದಿಂದಾಗಿ ಮೌಲ್ಯಮಾಪನವನ್ನು ಎಷ್ಟು ಕಲಿತಿದ್ದಾರೆ ಎಂದು ಅಳೆಯುವ ಸಾಧನವೆಂದು ನೋಡುವುದಕ್ಕೆ ಬದಲಾಗಿ ವಿದ್ಯಾರ್ಥಿಯ ಕಲಿಕೆ ಮತ್ತು ಅಭಿವೃದ್ಧಿಯ ಮೌಲ್ಯಮಾಪನ ಎಂದು ನೋಡಲಾಗುತ್ತಿದೆ. ಪ್ರಾಜೆಕ್ಟು ಮಾಡಿಸಿ ಪಾಠಮಾಡುವುದು ಈ ರೀತಿಯ ಮೌಲ್ಯಮಾಪನಕ್ಕೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಯಾಕೆಂದರೆ ಇದು ಮೌಲ್ಯಮಾಪನದ ಇನ್ನಿತರ ಸಾಂಪ್ರದಾಯಿಕ ವಿಧಾನಗಳಂತೆ ಅಂತಿಮ ಫಲಿತಾಂಶವನ್ನು ಮಾತ್ರವೇ ಮೌಲ್ಯಮಾಪನ ಮಾಡುವುದಿಲ್ಲ. ಒತ್ತಡವಿಲ್ಲದೇ ನಿರಾತಂಕವಾಗಿ ಮಗುವು ಕಲಿಯುತ್ತಿರುವಾಗ ಅದು ಎಷ್ಟು ಚೆನ್ನಾಗಿ ಕಲಿತಿದೆ ಎಂಬುದನ್ನು ಮೌಲ್ಯಮಾಪನ ಮಾಡಲು ಶಿಕ್ಷಕರಿಗೆ ಅವಕಾಶ ದೊರೆಯುತ್ತದೆ. ಕಲಿಯುತ್ತಿರುವಾಗಲೇ ತನ್ನ ಸಹಪಾಠಿಗಳು ಶಿಕ್ಷಕರು/ಮಾರ್ಗದರ್ಶಿಗಳಿಂದ ತಕ್ಷಣ ಮತ್ತು ತಿದ್ದುವ ಮೌಲ್ಯಮಾಪನ ಪಡೆದಾಗ ವಿದ್ಯಾರ್ಥಿಗೆ ತನ್ನ ಸ್ವಯಂ ಮೌಲ್ಯಮಾಪನಕ್ಕೆ ಉತ್ತಮ ಬುನಾದಿ ದೊರೆಯುತ್ತದೆ. ತಮ್ಮ ಪರಿಕಲ್ಪನೆ ಮತ್ತು ಕಾರ್ಯವಿಧಾನದ ತಿಳಿವಳಿಕೆಯಲ್ಲಿ ಏನು ಕೊರತೆ ಇದೆ ಎಂಬುದನ್ನು ಅರ್ಥಮಾಡಿಕೊಂಡು ಆ ಬಗ್ಗೆ ವಿಮರ್ಶಾತ್ಮಕವಾಗಿ ಚಿಂತಿಸಲು ತನ್ನ ಕೊರತೆಗಳನ್ನು ಸರಿಪಡಿಸಿಕೊಳ್ಳಲು ಮುಂದೆ ಅದಕ್ಕಾಗಿ ಶ್ರಮಿಸಲು ಅವಕಾಶ ಮಾಡಿಕೊಡುತ್ತದೆ.

ಶಿಕ್ಷಕರು ಪಠ್ಯಕ್ರಮದ ಉದ್ದೇಶಗಳನ್ನು ಸಾಧಿಸಲು ವಿಷಯ, ಮೂಲಸೌಕರ್ಯಗಳು, ವಿದ್ಯಾರ್ಥಿಗಳ ಅಗತ್ಯಗಳು, ಸ್ಥಳೀಯ ಸಂದರ್ಭಗಳು ಮತ್ತು ತಮ್ಮ ಸಾಮರ್ಥ್ಯ ಹಾಗೂ ಅನುಕೂಲಕ್ಕೆ ತಕ್ಕಂತೆ ವಿವಿಧ ಕಲಿಕಾಭ್ಯಾಸಗಳನ್ನು ಉಪಯೋಗಿಸಬೇಕಾಗುತ್ತದೆ. ಯಾವುದೋ ಒಂದು ವಿಧಾನವನ್ನು ಮಾತ್ರವೇ ಉಪಯೋಗಿಸುವುದರಿಂದ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಎಲ್ಲಾ ಉದ್ದೇಶಗಳನ್ನು ಸಾಧಿಸಲು ನೆರವಾಗುವುದಿಲ್ಲ. ಹೀಗಾಗಿ ವಿಜ್ಞಾನದ ಪರಿಣಾಮಕಾರಿ ಕಲಿಕೆ ಮತ್ತು ಬೋಧನೆಗೆ ವಿವೇಕಯುಕ್ತವಾದ ವಿಧಾನಗಳ ಮಿಶ್ರಣದ ಅವಶ್ಯಕತೆ ಇದೆ, ಇದರಲ್ಲಿ ಯೋಜನೆ ಆಧಾರಿತ ಕಲಿಕೆಯೂ ಒಂದು. ಯೋಜನೆ ಆಧಾರಿತ ಕಲಿಕೆಯ ಗುರಿ ನೈಜ ಜೀವನದ ಆಸಕ್ತಿದಾಯಕ ದೈನಂದಿನ ಸಮಸ್ಯೆಗಳನ್ನು ಪರಿಶೀಲಿಸುವುದು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕಾಲಾಂತರದಲ್ಲಿ ನಿರಂತರವಾಗಿ ಅವುಗಳ ಪ್ರಸ್ತುತತೆ, ಮೌಲ್ಯ ಹಾಗೂ ಯುಕ್ತಾಯುಕ್ತತೆಯನ್ನು ಕಂಡುಕೊಳ್ಳುವುದಾಗಿದೆ. ಇದನ್ನು ತರಗತಿ ಚರ್ಚೆ, ಮಾಧ್ಯಮದವರಿಂದ ಮಾಹಿತಿ ಸಂಗ್ರಹಣೆ, ಮತ್ತು ಪ್ರಧಾನವಾಗಿ ಶಿಕ್ಷಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಸರಳ ತನಿಖೆಗಳನ್ನು ನಡೆಸುವುದನ್ನೂ ಒಳಗೊಂಡಂತೆ ಚಟುವಟಿಕೆಯ ಸರಣಿಯ ಮೂಲಕ ಮಾಡಬಹುದಾಗಿದೆ. ಈ ವಿಧಾನದ ಮೌಲ್ಯವು ವಿದ್ಯಾರ್ಥಿಗಳು ಸಂರಚಿಸಿಕೊಳ್ಳುವ ಜ್ಞಾನ ಮತ್ತು ಅವರು ಅದಕ್ಕಾಗಿ ತೆಗೆದುಕೊಳ್ಳುವ ಹೊಣೆಗಾರಿಕೆಯಲ್ಲಿ, ವೈಜ್ಞಾನಿಕ ಸಾಮರ್ಥ್ಯಗಳನ್ನು, ಮೌಲ್ಯಗಳನ್ನು ಬೆಳೆಸಿಕೊಳ್ಳುವುದು, ಅತ್ಯಂತ ಪ್ರಮುಖವಾಗಿ ಜೀವನದ ನೈಜ ಸನ್ನಿವೇಶಗಳನ್ನು ಬಳಸಿಕೊಂಡು ಕಲಿಯುವುದರಲ್ಲಿ ಅಡಗಿದೆ.

ಪ್ರಿಯಾಂಕ ಅವರು ಈಗ ನವದೆಹಲಿಯ ಸೆಂಟರ್ ಫಾರ್ ಅಸೆಸ್ಮೆಂಟ್, ಇವ್ಯಾಲ್ಯುಯೇಷನ್ ಅಂಡ್ ರಿಸರ್ಚ್ (ಸಿ ಇ ಎಸ್ ಸಿ–ಪಿಯರ್ಸನ್ ಖಾಸಗಿ–ಸಾರ್ವಜನಿಕ ಕಾರ್ಯಕ್ರಮ) ಈ ಸಂಸ್ಥೆಯಲ್ಲಿ ಅಸೆಸ್ಮೆಂಟ್ ಅಧಿಕಾರಿ ಆಗಿದ್ದಾರೆ. ಇತ್ತೀಚಿನ ವರೆಗೆ ಅವರು ನವದೆಹಲಿಯ ಅಜೀಂ ಪ್ರೇಂಜಿ ಅಸೆಸ್ಮೆಂಟ್ ಅಂಡ್ ಅಕ್ರೆಡಿಷನ್ ಸಂಸ್ಥೆಯಲ್ಲಿ ಸೀನಿಯರ್ ಸ್ಪೆಷಲಿಸ್ಟ್ ಆಗಿದ್ದರು. ಸಂಶೋಧಕರಾಗಿ, ಶಿಕ್ಷಕರಾಗಿ ಮತ್ತು ಶಿಕ್ಷಕರ ಶಿಕ್ಷಕರಾಗಿ 14 ವರ್ಷಗಳ ಅನುಭವ ಇವರಿಗಿದೆ. ಅಜೀಂ ಪ್ರೇಂಜಿ ಪ್ರತಿಷ್ಠಾನದಲ್ಲಿ ಇವರು ವಿಜ್ಞಾನ ಶಿಕ್ಷಣ, ಸಿಸಿಇ ಸೇರಿದಂತೆ ತರಗತಿ ಮಟ್ಟದ ಮೌಲ್ಯಮಾಪನ, ಮೌಲ್ಯಮಾಪನ ಮತ್ತು ವಿಜ್ಞಾನ ಶಿಕ್ಷಣಕ್ಕೆ ಸಂಬಂಧಿಸಿದಂತೆ ವಿಶಾಲ ಪರಿಧಿಯ ಮೌಲ್ಯಮಾಪನ ಸಂಶೋಧನೆ ಹಾಗು ತರಬೇತಿ ಕಾರ್ಯಗಳಲ್ಲಿ ನಿರತರಾಗಿದ್ದರು. ಇವರನ್ನು dr-priyanka@in.com ನಲ್ಲಿ ಸಂಪರ್ಕಿಸಬಹುದು.